ಸಮಸ್ಯೆ ಅಂತ ನೋಡುವಾಗ ಒಬ್ಬ ಹುಡುಗನ ಲವ್ವಿನಲ್ಲಿ ಸಿಕ್ಕಿಬಿದ್ದಿದ್ದಾಳೆ ಅಂತ ಗೊತ್ತಾಯಿತು. ಬಸ್ಸಿನಲ್ಲಿ ಹೋಗುವಾಗ ಬರುವಾಗ ಆದ ಲವ್ವು ಅಂತೆ. ಪಾಠದ ವಿಷಯದಲ್ಲಿ ಅವಳಿಗೆ ಮಂಡೆಯೇ ಇಲ್ಲ. ತಾನು ಮದುವೆ ಆದರೆ ಅವನನ್ನೇ ಅಂತ ಕೂತುಬಿಟ್ಟು. ಯಾರು ಆ ಹುಡುಗ ಅಂತ ನೋಡಿದಾಗ ಪಕ್ಕದ ಊರಿನವ ನಮ್ಮದೇ ಜಾತಿಯವ ಅಂತ ಗೊತ್ತಾಯಿತು. ಸೊಸೈಟಿಯಲ್ಲಿ ಟೆಂಪರ್ವರಿ ಲೆಕ್ಕ ಬರಿಯುವ ಕೆಲಸದಲ್ಲಿ ಇದ್ದಾನೆ ಅಂತ ಗೊತ್ತಾಯಿತು. ಪ್ರಾಯದಲ್ಲಿ ತುಂಬ ವ್ಯತ್ಯಾಸ ಇತ್ತು. ಆದ್ರೆ ಸಾ ಮದುವೆ ಮಾಡಿಕೊಟ್ಟೆ. ಮದುವೆ ಆಗಿ ಸುಮಾರು ಹದಿನೈದು ಹದಿನಾರು ವರ್ಷ ಆಗಿತ್ತು. ಎರಡು ಹೆಣ್ಣು ಮಕ್ಕಳು ಆದವು. ಚೆಂದದಲ್ಲಿಯೇ ಇದ್ರು. ಗಂಡು ಮಗು ಬೇಕು ಅಂತ ಮೂರನೇದ್ದು ಬಸಿರಾದ್ಲು ಹೋದ ವರ್ಷ. ಆದ್ರೆ ಆದ ಕತೆಯೇ ಬೇರೆ'.

'ಯಾಕೇ? ಎಂತ ಆಯ್ತು?'

'ಹೋದ ವರ್ಷ ಲಾಕ್‌ಡೌನ್ ಆಯ್ತಲ್ವಾ? ಅಳಿಯನ ಕೆಲಸ ಹೋಯ್ತು. ಅವನ ಅಣ್ಣಂದಿರು ಮನೆಯಿಂದ ಹೊರಗೆ ಹಾಕಿದ್ರು. ಆಸ್ತಿಯಲ್ಲಿ ಎಂಥದೂ ಕೊಡೂದಿಲ್ಲ ಅಂತ ಹೇಳಿದ್ರು. ಅಳಿಯ ಬಜೀ ಶಂಬುಲಿಂಗ. ಪಾಪ ಅಂದ್ರೆ ಕಂಡಾಬಟ್ಟೆ ಪಾಪದವ. ಅಣ್ಣಂದಿರಿಗೆ ತಿರುಗಿ ಒಂದು ಮಾತು ಸಾ ಆಡದವ. ಮತ್ತೆ ಎಂತ ಮಾಡುದು? ಮಗಳು, ಅಳಿಯ ಮೊಮ್ಮಕ್ಕಳನ್ನು ನಾನೇ ಸಾಕ್ತೇನೆ. ನಂಗೆ ಸಾ ಯಾರೂ ದಿಕ್ಕಿಲ್ಲ ಅಲ್ವಾ ಅಂತ ಎಣಿಸಿದೆ. ಆದ್ರೆ ಆದದ್ದೇ ಬೇರೆ'.

'ಎಂತ ಆಯ್ತು ಅಮ್ಮ'?

'ಕಳೆದ ವರ್ಷ ಮೇಯಲ್ಲಿ ಮನೆಯ ಅಂಗಳದಲ್ಲಿಯೇ ಇದ್ದ ಮಾವಿನ ಮರಕ್ಕೆ ಹತ್ತಿದ ಅಳಿಯ ಆಯ ತಪ್ಪಿ ಕೆಳಗೆ ಬಿದ್ದ. ತಲೆಗೆ ಪೆಟ್ಟಾಗಿ ಎರಡೇ ದಿನಕ್ಕೆ ಹೋದ'.

'ಯಾ. ಅಲ್ಲಾ!'

'ಅಳಿಯ ಸತ್ತದ್ದು ಏಳು ತಿಂಗಳ ಗರ್ಭಿಣಿಯಾಗಿದ್ದ ಮಗಳಿಗೆ ಶಾಕ್ ಆಯಿತು. ಹದಿನೈದು ಇಪ್ಪತ್ತು ದಿನದಲ್ಲಿ ಅವಳಿಗೆ ಹೆರಿಗೆ ಆಯಿತು. ತಾಯಿ ಮಗಳು ಇಬ್ರೂ ಉಳೀಲಿಲ್ಲ' – ಸೆರಗು ಬಾಯಿಗೆ ಇಟ್ಟು ರಾಜೀವಿ ಕೂಗಿದಳು.

'ಅಮ್ಮಾ ಸಮಾಧಾನ ಮಾಡಿಕೊಳ್ಳಿ. ನಾನು ನಿಮ್ಮ ಹತ್ರ ಸ್ವಂತ ವಿಷಯ ಕೇಳ್ಬೇಬಾರ್ದಿತ್ತಾ ಏನ ಅಲ್ವಾ? ನಾನು ಕೇಳಿದ್ರಿಂದ ನಿಮ್ಮ ದುಕ್ಕ ಹೆಚ್ಚಾಯಿತಾ ಅಂತ? ಅಲ್ಲಾಹು ಒಂದಲ್ಲ ಒಂದು ರೀತಿಯಲ್ಲಿ ಒಳ್ಳೇದು ಮಾಡ್ತಾನೆ. ಆ ನಂಬಿಕೆಯಿಂದ್ಲೇ ಬದುಕಬೇಕು. ನಂದೂ ಹೆಚ್ಚೂ ಕಮ್ಮಿ ನಿಮ್ಮದೇ ಕತೆ' ಅಂತ ಹೇಳಿ ದೊಡ್ಡ ಸ್ವಾಸ ಬಿಟ್ಟಳು.

'ಎಂತಕ್ಕೆ? ನಿಂಗೆ ಗಂಡ, ಮನೆಯೆಲ್ಲ ಇಲ್ವಾ?'

'ಇದ್ದಾನೆ ಅಂದ್ರೆ ಇದ್ದಾನೆ. ಇಲ್ಲ ಅಂದರೆ ಇಲ್ಲ'.

'ಹಾಗಂದ್ರೆ!?'

'ಅವನು ಬರದೆ ಮೂರು ನಾಕು ವರ್ಷ ಆಯಿತು. ಇರೂದು ಕತಾರಿನಲ್ಲಿ. ಒಂದು ಸಣ್ಣ ಉದ್ಯೋಗದಲ್ಲಿ. ಈಗ ಅದೂ ಇಲ್ಲ. ಊರಿಗೆ ಬರ್ಲಿಕ್ಕೆ ಸಾ ಆಗೂದಿಲ್ಲ. ಮುಂಚೆ ನಾನು ಗಂಡನ ಮನೆಯಲ್ಲಿ ಇದ್ದೆ. ಸಂಪಾದನೆ ಇದ್ದಾಗ ಸ್ವಲ್ಪ ಸ್ವಲ್ಪ ದುಡ್ಡು ಕಳಿಸ್ತಾ ಇದ್ದ. ಯಾವಾಗ ಅವನ ಕೆಲಸ ಹೋಗಿ ಸಂಪಾದನೆ ನಿಂತಿತಾ ಗಂಡನ ಮನೆಯವರು ನನ್ನನ್ನು ಮನೆಯಿಂದ ಹೊರಗೆ ಹಾಕಿದ್ರು. ಅವನಿಗೆ ಫೋನ್ ಮಾಡಿ ನನ್ನ ಬಂಗ ಹೇಳಿಕೊಂಡರೆ, ನಾನು ಎಂತ ಮಾಡಲಿ? ಅಂತ ನನ್ನ ಹತ್ರವೇ ಕೇಳ್ತಾನೆ! ಕಡೆಗೆ ನಾನು ಮಕ್ಕಳನ್ನು ಕಟ್ಟಿಕೊಂಡು ಅಮ್ಮನ ಮನೆಗೆ ಬಂದೆ. ಕಳೆದ ವರ್ಷದ ಲಾಕ್‌ಡೌನ್ ಓಪನ್ ಆದ ನಂತರ ಬೀಡಿ ಕಟ್ಟಿಕೊಂಡು ಬದುಕ್ತಾ ಇದ್ದೆ. ಎಲ್ಲ ಸರಿಯಾಗ್ತದೆ ಅನ್ನೊವಾಗ ಮತ್ತೆ ಲಾಕ್‌ಡೌನ್. ಮನೆಯಲ್ಲಿ ಯಾರಿಗೆ ಸಾ ಕೆಲಸ ಇಲ್ಲ. ತಿನ್ನಲಿಕ್ಕೆ ಎಂಥದೂ ಇಲ್ಲದ ಸ್ಥಿತಿ. ಅತ್ತಿಗೆಯಂದಿರ ಕುಚ್ಚಣದ ಮಾತು ಬೇರೆ.ಕಳೆದ ಸರ್ತಿ ಬೇರೆ ಬೇರೆ ಸಂಘದವರು, ಪಕ್ಷದವರು ಕಿಟ್ ಅದು ಇದು ಅಂತ ಕೊಟ್ಟಿದ್ರು.



ಆದರೆ ಈ ಸರ್ತಿ ಎಂಥದೂ ಇಲ್ಲ. ಆಗ ಯಾರಾ ಹೇಳಿದ್ರು ಪೇಟೆಯಲ್ಲಿ ಸರ್ಕಾರದವರು ಹೀಗೆ ಕ್ಯಾಂಟೀನ್ ಮಾಡಿದ್ದಾರೆ. ತಿಂಡಿ ಊಟ ಎಲ್ಲ ಕೊಡ್ತಾರೆ ಧರ್ಮಕ್ಕೆ ಅಂತ. ನಿನ್ನೆ ಮೊನ್ನೆ ಆಸೆಯಿಂದ ಬಂದಿದ್ದೆ. ಆದ್ರೆ ಲೇಟಾಯ್ತು ಅಂತ ಎಂತ ಸಾ ಸಿಗ್ಲಿಲ್ಲ. ಇವತ್ತು ಬೇಗನೇ ಬಂದಿದ್ದೆ. ಹೆಚ್ಚು ಹೊತ್ತು ನಿಲ್ಲಿಕ್ಕೆ ಆಗೂದಿಲ್ಲಾಂತ ಸ್ಕಾರ್ಫ್ ಹಾಕಿ ಇಟ್ಟಿದ್ದೆ. ಅದು ಗಾಳಿಗೆ ಹಾರಿ ಹೋಗಿ ಇಷ್ಟೆಲ್ಲ ರಗಳೆ ಆಯಿತು. ಈಗಿನ ಪರಿಸ್ಥಿತಿ ನೋಡಿದ್ರೆ ಇವತ್ತು ಸಾ ತಿಂಡಿ ಸಿಗುವ ನಮೂನಿ ಕಾಣೂದಿಲ್ಲ. ನೀವು ಎಲ್ಲಿ ಇಟ್ಟಿದ್ದೀರಿ? ಗುರುತನ್ನು?'

'ಓ ಅಲ್ಲಿ. ಹೆಂಗಸರ ಸಾಲಿನಲ್ಲಿ ಸುರೂವಿಗೆ ಇರೂದೇ ನಂದು ಮೆಟ್ಟು' ಅಂತ ರಾಜೀವಿ ತೋರಿಸಿದಳು.

ಅಷ್ಟು ಹೊತ್ತಿಗೆ ಸೆಕ್ಯುರಿಟಿಯವ ದೊಡ್ಡದಾಗಿ ವಿಸಿಲ್ ಊದಿ, 'ತಿಂಡಿ ಕೊಡ್ಳಿಕ್ಕೆ ಸುರುಮಾಡ್ತಾರೆ ಈಗ. ಎಲ್ರು ಸಾ ಮುಖಕ್ಕೆ ಮಾಸ್ಕ್ ಸರಿಯಾಗಿ ಹಾಕಿಕೊಳ್ಳಿ. ಒಂದೊಂದು ಮೀಟರ್ ದೂರದಲ್ಲಿ ಹಾಕಿದ ಚೌಕಟ್ಟಿನ ಒಳಗೇ ನಿಲ್ಲಿ' ಅಂತ ಗಟ್ಟಿಯಾಗಿ ಹೇಳಿದ. ದೂರ ದೂರ ಕೂತಿದ್ದವರೆಲ್ಲ ತಮ್ಮ ತಮ್ಮ ಗುರುತಾಗಿ ಹಾಕಿದ್ದ ಸ್ಥಳಕ್ಕೆ ಬಂದರು.

'ನಿಮಗೆ ಇವತ್ತು ತಿಂಡಿ ಸಿಗೂದು ಗ್ಯಾರಂಟಿ. ನಂಗೆ ಸಿಗೂದಿಲ್ಲ ನಾನು ಹೋಗ್ತೇನೆ' ಅಂತ ಹೇಳಿ ಐಶಾಬಿ ಎದ್ದಳು.

'ಮಗಾ. ಎಲ್ಲಿಗೆ ಹೋಗುದು? ನಿಲ್ಲು' ಅಂತ ಹೇಳಿದವಳೇ ಐಶಾಬಿಯ ಕೈ ಹಿಡಿದು ತಾನು ಇಟ್ಟಿದ್ದ ಮೆಟ್ಟಿನ ಗುರುತು ಇದ್ದ ಕಡೆಗೆ ರಾಜೀವಿ ಬಂದಳು.

'ಮಗಾ ನಿನ್ನನ್ನು ನೋಡಿದಾಗ ನಂಗೆ ನನ್ನ ಮಗಳ ನೆನಪಾಯಿತು. ಇಗಾ ನನ್ನ ಬದಲಿಗೆ ಇವತ್ತು ನೀನೇ ತಿಂಡಿ ತೆಕ್ಕೋ' ಅಂದಳು.

'ಇಲ್ಲ ಅಮ್ಮಾ ಅದು ಸರಿಯಲ್ಲ'.

'ನೋಡು ನೀನು ನನ್ನ ಮಗಳ ಸಮ ಅಂತ ಹೇಳಿದ್ದೇನೆ. ಮಗಳು ತಾಯಿ ಹೇಳಿದ ಹಾಗೆ ಕೇಳದಿದ್ದರೆ ಹೇಗೆ?'

ಐಶಾಬಿಯ ಬಾಯಿ ಕಟ್ಟಿತು. ರಾಜೀವಿ ತಾನು ಗುರುತಾಗಿ ಇಟ್ಟಿದ್ದ ಮೆಟ್ಟನ್ನು ತೆಕ್ಕೊಂಡಳು. ಅದರ ಉಂಗುಷ್ಠ ಎದ್ದು ಬಂದಿತ್ತು. ಅದನ್ನು ಹಾಕ್ಕೊಂಡು ಕಾಲು ಎಳ್ಕೊಂಡು ಅಲ್ಲಿಯೇ ಇದ್ದ ನಳ್ಳಿಯಲ್ಲಿ ನೀರು ಕುಡಿದು ಊರಿನ ಕಡೆಗೆ ಹೆಜ್ಜೆ ಹಾಕಿದಳು. ನಾಕು ಹೆಜ್ಜೆ ನಡೆದಿದ್ದಾಳಷ್ಟೇ. ಹಿಂದುಗಡೆಯಿಂದ 'ಅಮ್ಮಾ ಅಮ್ಮಾ' ಅಂತ ಕರಿಯುದು ಕೇಳಿತು. ತಿರುಗಿ ನೋಡಿದ್ರೆ ಐಶಾಬಿ ನಿಲ್ಲಿ ನಿಲ್ಲಿ ಅಂತ ಸನ್ನೆ ಮಾಡ್ತಾ ಇದ್ದಾಳೆ! ರಾಜೀವಿ ನಿಂತಳು. ಐಶಾಬಿ ಓಡಿ ಬಂದವಳೇ, 'ಅಮ್ಮಾ ಆರು ಇಡ್ಲಿ ಕೊಟ್ಟಿದ್ದಾರೆ. ನಂಗೆ ಮೂರು ಸಾಕು. ನಿಮ್ಮ ಮೊಮ್ಮಕ್ಕಳಿಗೆ ಮೂರು ತೆಕ್ಕೊಂಡು ಹೋಗಿ. ಈಗ ಮಗಳು ಹೇಳಿದ್ದನ್ನು ತಾಯಿ ಕೇಳ್ಬೇಕು' ಅಂತ ಹೇಳಿದಳು. ಒಮ್ಮೆ ಬೇಡ ಅಂತ ಹೇಳ್ಳಿಕ್ಕೆ ರಾಜೀವಿ ಬಾಯಿ ತೆಗೆದರೂ ಮಗಳಾಗಿ ಹೇಳ್ತಾ ಇದ್ದೇನೆ ಅಂತ ಹೇಳಿದಾಗ ಬಾಯಿ ಮುಚ್ಚಿದಳು. ಮಾತ್ರ ಅಲ್ಲ, ಹಸಿವಿನಿಂದ ಒದ್ದಾಡ್ತಾ ಇರುವ ಮೊಮ್ಮಕ್ಕಳು ನೆನಪಾದ್ರು. ಐಶಾಬಿಯಿಂದ ತೆಕ್ಕೊಂಡು ಹೊರಡುವಾಗ, 'ಅಮ್ಮಾ ಒಂದು ನಿಮಿಷ ನಿಮ್ಮ ಮೆಟ್ಟನ್ನು ಇಲ್ಲಿ ಕೊಡಿ' ಅಂದಳು.

ರಾಜೀವಿ ಗಾಬರಿಯಿಂದ 'ಎಂತಕ್ಕೆ ಮಗಾ?' ಅಂದಳು. 'ತೆಗ್ದುಕೊಡಿ ಅಂದ್ರೆ ತೆಗ್ದುಕೊಡಿ ಅಷ್ಟೇ'. ರಾಜೀವಿ ಸ್ಲಿಪ್ಪರನ್ನು ತೆಗೆದಳು. ಐಶಾಬಿ ಒಂದು ಸೇಫ್ಟಿಪಿನ್ನನ್ನು ಮೆಟ್ಟಿನ ಉಂಗುಷ್ಠಕ್ಕೆ ಸಿಕ್ಕಿಸಿ ಸರಿ ಮಾಡಿದಳು. 'ಇನ್ನು ಹಾಕ್ಕೊಂಡು ಹೋಗಿ' ಅಂದಳು.

ಹೊರಡುವಾಗ ಇಬ್ಬರೂ ನೋಡಿಕೊಂಡರು. ಕಣ್ಣು ಮಂಜಾಗಿ ಇಬ್ರಿಗೂ ಎಂಥದೂ ಕಾಣಲಿಲ್ಲ.

ಪ್ರತಿಕ್ರಿಯಿಸಿ: feedback@sudha.co.in